

ಬೆಕಿ ಜಿ ಜತೆಗೂಡಿ ಹೊರತಂದ. ಕೊರಿಯನ್, ಸ್ಪ್ಯಾನಿಷ್ ಹಾಗೂ ಇಂಗ್ಲಿಷ್ ಮೂರೂ ಭಾಷೆಗಳ ಸಾಹಿತ್ಯವನ್ನು ಅದು ಒಳಗೊಂಡಿತ್ತು. ಅವನು ಓದಿದ ಶಾಲೆಯಲ್ಲಿಯೇ ಅವನ ತಂದೆ ಸಾಹಿತ್ಯದ ಮೇಷ್ಟರಾಗಿದ್ದರು.

ಜಂಗ್–ಕೂಕ್ 14ರ ಪ್ರಾಯದಲ್ಲೇ ಲಾಸ್ ಏಂಜಲೀಸ್‌ಗೆ ನೃತ್ಯ–ಸಂಗೀತದ ಚುಂಗು ಹಿಡಿದು ಹೊರಟವನು. ಬಿಟಿಎಸ್ ತಂಡದ ಈ ಹಾಡುಗಾರ, ಬ್ಯಾಂಡ್‌ನ ತನ್ನ ಸಹಪಾಠಿಗಳಲ್ಲೇ ಕಿರಿಯವನು. ಈಗ 24ರ ಹರೆಯ. ಬ್ಯಾಡ್ಮಿಂಟನ್ ಆಟಗಾರ ಆಗಬೇಕು ಎಂದು ಬಾಲ್ಯದಲ್ಲಿ ಅಂದುಕೊಂಡಿದ್ದವನು 'ರ್‍ಯಾಪರ್ ಜಿ–ಡ್ರ್ಯಾಗನ್' ಪ್ರದರ್ಶನ ಕಂಡು ತಾನೂ ಗಾಯಕನಾಗಲು ಬಯಸಿದ. ಕೊರಿಯಾದ ಪ್ರತಿಭಾ ಶೋಧದ ಶೋ 'ಸೂಪರ್‌ಸ್ಟಾರ್ ಕೆ' ಆಡಿಷನ್‌ಗೆ ಹೋದರೂ ಆಯ್ಕೆಯಾಗಲಿಲ್ಲ. ಆಮೇಲೆ ಬಿಗ್ ಹಿಟ್ ಎಂಟರ್‌ಟೇನ್‌ಮೆಂಟ್ ಕಂಪನಿಯ ತರಬೇತುದಾರನಾಗಿ ಸೇರಿಕೊಂಡ. ಅದೇ ಬಿಟಿಎಸ್‌ನಲ್ಲಿ ಒಬ್ಬನಾಗುವ ಅವಕಾಶ ಸೃಷ್ಟಿಸಿತು.

2010ರಲ್ಲಿ ಮೊದಲ ಬಾರಿಗೆ ಬಿಟಿಎಸ್ ಅರ್ಥಾತ್ 'ಬುಲೆಟ್ ಪ್ರೂಫ್ ಬಾಯ್ ಸ್ಕೌಟ್ಸ್' ಹುಟ್ಟಿದ್ದು. ಜೆ–ಲಿಮ್, 2ಎಎಂ ಹಾಗೂ ಲೀ ಸ್ಯುಂಗ್ ಗಿ ಎಂಬ ರ್‍ಯಾಪರ್‌ಗಳು ಒಟ್ಟಾಗಿ ಹಾಡುಗಳನ್ನು ಈ ಬ್ಯಾಂಡ್‌ಗಾಗಿ ಮಾಡಿದರು. 2011ರಲ್ಲಿ ಟ್ವಿಟ್ಟರ್ ಖಾತೆ ತೆರೆದದ್ದು. 2012ರ ಡಿಸೆಂಬರ್‌ನಲ್ಲಿ ಟ್ವಿಟ್ಟರ್ ಮೂಲಕ ಜಗತ್ತಿಗೆ ಪರಿಚಯಿಸಿಕೊಂಡಿದ್ದು. 2013ರ ಜುಲೈನಲ್ಲಿ '2 ಕೂಲ್ 4 ಸ್ಕೂಲ್' ಎಂಬ ಮೊದಲ ಸಿಂಗಲ್ ಆಲ್ಬಂ ಬಿಡುಗಡೆ ಮಾಡಿದರು. ಅದೇ ವರ್ಷ ಸೆಪ್ಟೆಂಬರ್‌ನಲ್ಲಿ 'ಓ!ರೂಲ್8, 2' ಎಂಬ 'ಎಕ್ಸ್‌ಟೆಂಡೆಡ್ ಪ್ಲೇ' (ಸಿಡಿ ರೀತಿ ಹಲವು ಹಾಡುಗಳನ್ನು ಒಳಗೊಂಡಂಥದ್ದು) ಹೊರತಂದರು. ಹತ್ತು ಹಾಡುಗಳು ಅದರಲ್ಲಿದ್ದವು. ಅದೇ ವರ್ಷ ನವೆಂಬರ್‌ಬಲ್ಲಿ ಸೌತ್ ಕೊರಿಯನ್ ಮೆಲನ್ ಮ್ಯೂಸಿಕ್ ಹೊಸ ಕಲಾವಿದರಿಗೆ ನೀಡುವ ಶ್ರೇಷ್ಠ ಪ್ರಶಸ್ತಿ ಸಂದಿತು. ಇದು ಬಿಟಿಎಸ್‌ಗೆ ದೊರೆತ ಮೊದಲ ದೊಡ್ಡ ಗೌರವ. ಆಮೇಲೆ 14 ಪ್ರಶಸ್ತಿಗಳು ಸಾಲುಸಾಲಾಗಿ ಬಂದವು.

2014ರಲ್ಲಿ 'ಸ್ಕೂಲ್ ಲವ್ ಅಫೇರ್ಸ್' ಎಂಬ ಇನ್ನೊಂದು ಇಪಿ ಬಿಡೆಗಡೆಯಾಗಿ, ವಿಶ್ವ ಆಲ್ಬಂ ಚಾರ್ಟ್‌ಗಳಲ್ಲಿ ಅತಿ ಹೆಚ್ಚು ಕೇಳಲಾದ ಮೂರನೇ ಆಲ್ಬಂ ಎನಿಸಿಕೊಂಡಿತು. ಸಿಯೋಲ್‌ನಲ್ಲಿ ಅಭಿಮಾನಿಗಳಿಗೆಂದು ಮೊದಲ ಪ್ರದರ್ಶನ ಆಯೋಜಿಸಿದ್ದು ಅದೇ ವರ್ಷ. ಅಮೆರಿಕದ ಲಾಸ್ ಏಂಜಲೀಸ್, ಬರ್ಲಿನ್‌ನತ್ತಲೂ ಬ್ಯಾಂಡ್ ಕಛೇರಿಗಾಗಿ ಪಯಣ ಬೆಳೆಸಿತು. 2014ರ ನವೆಂಬರ್‌ನಲ್ಲಿ ಮೊದಲ ಸ್ಟುಡಿಯೊ ಆಲ್ಬಂ 'ಡಾರ್ಕ್ ಅಂಡ್ ವೈಲ್ಡ್' ಹೊರತಂದಿತು. 14 ಹಾಡುಗಳು ಅದರಲ್ಲಿದ್ದವು.

2013ರಲ್ಲಿ ಬಿಗ್ ಹಿಟ್ ಎಂಟರ್‌ಟೇನ್‌ಮೆಂಟ್ ಕಂಪನಿಯು ಬಿಟಿಎಸ್ ಅರ್ಥಾತ್ 'ಬ್ಯಾಂಗ್‌ಟನ್ ಬಾಯ್ಸ್'ಗೆ ನಿಜ ಬ್ಯಾಂಡ್‌ನ ಸ್ವರೂಪ ನೀಡಿದ್ದು. ಅದಕ್ಕೂ ಮೊದಲು ತೂಗಿಸಿಕೊಂಡು ಹೋಗಲು ಹಣವಿಲ್ಲದೆ ಬ್ಯಾಂಡ್ ಅನ್ನು ಬರ್ಖಾಸ್ತುಗೊಳಿಸಿ, ಎರಡೆರಡು ಪಾಳಿಯಲ್ಲಿ ಕೆಲಸ ಮಾಡಬೇಕಾದ ಒತ್ತಡಕ್ಕೆ ಕಲಾವಿದರು ಸಿಲುಕಿದ್ದರು. ಆಡಿಷನ್ ಮಾಡಿ, ಹಲವಾರು ಪ್ರತಿಭೆಗಳನ್ನು ಸೋಸಿ, ಆಮೇಲೆ ಯಾರು ಅತ್ಯುತ್ತಮರು ಎಂದು ನಿರ್ಧರಿಸಿ ಈ ಬ್ಯಾಂಡ್‌ಗೆ ಹದಿಹರೆಯದವರನ್ನು ಆಯ್ಕೆ ಮಾಡಿಕೊಳ್ಳುವುದು 'ಬಿಗ್‌ಹಿಟ್ ಎಂಟರ್‌ಟೇನ್‌ಮೆಂಟ್' ಕಂಪನಿಯ ಜಾಯಮಾನ. ದೂರದೃಷ್ಟಿ ಇಟ್ಟುಕೊಂಡು, ಶಾಲಾ ಮಕ್ಕಳ ಮನಸ್ಸನ್ನು ಹಿಡಿದಿಡುವಂಥ ಸಾಹಿತ್ಯವನ್ನೇ ಹಾಡುಗಳಲ್ಲಿ ಬರೆಸಿ, ಲಾಲಿತ್ಯದಿಂದ ನರ್ತಿಸಿ ಕಲಾವಿದರಿಂದ ಕಂಪನಿ ಆಲ್ಬಂಗಳನ್ನು ಮಾಡಿಸುತ್ತದೆ. ಆಗೀಗ ತಮ್ಮದೇ ಸಿಂಗಲ್ ಆಲ್ಬಂಗಳನ್ನೂ ಈ ಕಲಾವಿದರು ಹೊರತರುತ್ತಾರೆ.